**ಓ.ಎಸ್. ನಂ. 323/2019 ಪಿ.ಡಬ್ಲೂ-2 ಹೆಸರು - ಕೆ. ಸಿದ್ದಶೆಟ್ಟಿ**

**ಸಾಕ್ಷಿಯನ್ನು ದಿನಾಂಕಃ 23/08/2023 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ. ಕೆ.ಎಸ್.ಎನ್. ಪ್ರತಿವಾದಿ ಪರ ವಕೀಲರಿಂದಃ-**

ವಾದಿ ನನಗೆ ಗೊತ್ತು. ವಾದಿ ಅಂಬಳೆ ಗ್ರಾಮದಲ್ಲಿ ವಾಸವಿರುತ್ತಾರೆ. ಪಿ.ಡಬ್ಲೂ-3 ಅಶ್ವಥಶೆಟ್ಟಿ ವಾದಿಯ ಸ್ವಂತ ತಮ್ಮ ಎಂದರೆ ಸರಿ. ನಾನು ವಾದಿ ಮತ್ತು ಪಿ.ಡಬ್ಲೂ-3 ರವರ ಚಿಕ್ಕಪ್ಪ ಎಂದರೆ ಸರಿ. ನಿಮಗೆ ವಾದಿ ಈ ಪ್ರಕರಣವನ್ನು ಏಕೆ ಸಲ್ಲಿಸಿದ್ದಾರೆ ಗೊತ್ತೇ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವೆ ಸಲ್ಲಿಸುವ ಕಾಲಕ್ಕೆ ವಾದಿ ತಾನು ಮೈಸೂರಿನ ಕುಂಬಾರ ಕೊಪ್ಪಲು ವಿನಲ್ಲಿ ವಾಸವಿದ್ದೇನೆ ಎಂದು ಬರೆಸಿದ್ದಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪಿ.ಡಬ್ಲೂ-3 ಮಂಡ್ಯದಲ್ಲಿ ವಾಸವಿದ್ದಾರೆ ಎಂದರೆ ಸರಿ.

ಪ್ರತಿವಾದಿ ಹುಟ್ಟಿದಾಗಿನಿಂದಲೂ ಅಂಬಳೆ ಯಲ್ಲಿ ವಾಸವಿದ್ದಾರೆ ಎಂದರೆ ನೆಲ್ಲಿತಾಳಪುರದಲ್ಲಿ ಇದ್ದರು ಎಂದು ನುಡಿಯುತ್ತಾರೆ. ಪ್ರತಿವಾದಿ ಅಂಬಳೆಯಲ್ಲಿ ವಾಸವಿಲ್ಲ. ವಾದಿಯು ನನಗೆ ಸಂಬಂಧಿಯಾಗಿರುವುದರಿಂದ ಪ್ರತಿವಾದಿಯು ಅಂಬಳೆ ಯಲ್ಲಿ ವಾಸವಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯ ಆಧಾರ್ ಕಾರ್ಡ್ ನೋಡಿಲ್ಲ. ವಾದಿ ಎಲ್ಲಿ ಮತ ಚಲಾಯಿಸುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾನು ಹುಟ್ಟಿದಾಗಿನಿಂದಲೂ ಅಂಬಳೆ ಗ್ರಾಮದಲ್ಲಿ ವಾಸವಿದ್ದೇನೆ. ವಾದಿಗೆ ಅಂಬಳೆಯಲ್ಲಿ ಮತವಿರುವ ಬಗ್ಗೆ ಮತ್ತು ಪಡಿತರ ಚೀಟಿ ಇರುವ ಬಗ್ಗೆ ನನಗೆ ಗೊತ್ತಿಲ್ಲ.

ಪ್ರತಿವಾದಿಗೆ ಅಂಬಳೆಯಲ್ಲಿ ಮತವಿದೆ ಮತ್ತು ಅಂಬಳೆಯಲ್ಲಿಯೇ ಪಡಿತರ ಚೀಟಿ ಇದ್ದು ಅಲ್ಲಿಯೇ ರೇಷನ್ ಅಂಗಡಿಯಿಂದ ಪಡಿತರ ವನ್ನು ಪಡೆಯುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ನಮ್ಮ ಊರಿನ ಜನಾಂಗದ ಮುಖಂಡ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಬಳಿ ವಾದಿ ಮತ್ತು ಪ್ರತಿವಾದಿ ಇಬ್ಬರು ದಾವಾ ಸ್ವತ್ತಿಗೆ ಸಂಬಂಧಿಸಿದ ವಿವಾದಕ್ಕೆ ಪಂಚಾಯಿತಿಗೆ ಬಂದಿದ್ದರು. ನನ್ನ ಮುಂದೆ ಯಾವುದೇ ಪಂಚಾಯಿತಿ ನಡೆದಿಲ್ಲ ಎಂದರೆ ಸರಿಯಲ್ಲ.

ಇಂದಿಗೆ ದಾವಾ ಸ್ವತ್ತಿನ ಪೂರ್ವಕ್ಕೆಃ ರಾಮಕೃಷ್ಣ ರವರ ಮನೆ, ಪಶ್ಚಿಮಕ್ಕೆ ರಾಮಮಂದಿರ, ಉತ್ತರಕ್ಕೆ ಸರ್ಕಾರಿ ರಸ್ತೆ, ದಕ್ಷಿಣಕ್ಕೆಃ ರಸ್ತೆ ಇದೆ. ಈ ಚೆಕ್ಕುಬಂಧಿಯ ನಡುವೆ ಮನೆ ಮತ್ತು ಕೊಟ್ಟಿಗೆ ಇದೆ ಎಂದರೆ ಸರಿ. ಸದರಿ ಮನೆಯನ್ನು ಪ್ರತಿವಾದಿಯ ತಂದೆ ಸಣ್ಣಶೆಟ್ಟಿ ಸುಮಾರು 40 ವರ್ಷಗಳ ಹಿಂದೆ ಕಟ್ಟಿಸಿದ್ದರು ಎಂದರೆ ಸರಿಯಲ್ಲ. ಈಗ ಸಣ್ಣಶೆಟ್ಟಿ ಮೃತಪಟ್ಟಿದ್ದಾರೆ ಎಂದರೆ ಸರಿ. ಈಗ ದಾವಾ ಸ್ವತ್ತಿನಲ್ಲಿ ಪ್ರತಿವಾದಿ ವಾಸವಿದ್ದಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಕೊಟ್ಟಿಗೆಯನ್ನು ಪ್ರತಿವಾದಿ ನಿರ್ಮಿಸಿದ್ದಾರೆ ಎಂದರೆ ಸರಿಯಲ್ಲ. ವಾದಿ ನನಗೆ ಸಂಬಂಧಿಯಾಗಿರುವುದರಿಂದ ವಾದಿಯು ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇರದೇ ಇದ್ದರೂ ಕೂಡ ಸ್ವಾಧೀನದಲ್ಲಿ ಇದ್ದಾರೆ ಎಂದು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ

ಸರಿಯಲ್ಲ. ದಾವಾ ಸ್ವತ್ತಿಗೆ ಸಂಬಂಧಪಟ್ಟ ಅಸಸ್ ಮೆಂಟ್, ನೀರಿನ ಕರ ಮತ್ತು ವಿದ್ಯುತ್ ಶಕ್ತಿ ಬಿಲ್ ಎಲ್ಲವೂ ಪ್ರತಿವಾದಿಯ ತಂದೆಯ ಹೆಸರಿನಲ್ಲಿ ಇದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಪ್ರಮಾಣ ಪತ್ರದಲ್ಲಿ ದಾವಾ ಸ್ವತ್ತು ಖಾಲಿ ನಿವೇಶನ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ನನಗೆ ಸಂಬಂಧಪಟ್ಟ ಪ್ರಕರಣವಿದ್ದು ಅದರಲ್ಲಿ ನ್ಯಾಯಾಲಯಕ್ಕೆ ಬರುತ್ತಿದ್ದೆ ಎಂದರೆ ಸರಿ. ನನಗೆ ನ್ಯಾಯಾಲಯಕ್ಕೆ ಪದೇ ಪದೇ ಬಂದಿರುವುದರಿಂದ ವಾದಿಯ ಪರವಾಗಿ ಬಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ಸಂಬಂಧಪಟ್ಟ ದಾಖಲಾತಿಗಳನ್ನು ನಾನು ನೋಡಿಲ್ಲ. ದಾವಾ ಸ್ವತ್ತಿಗೆ ಸಂಬಂಧಪಟ್ಟ ಯಾವ ವಿಚಾರವು ನನಗೆ ಗೊತ್ತಿರದೇ ಇದ್ದರು ಕೂಡ ವಾದಿಯ ಪರವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯು ಕುಂಬಾರಕೊಪ್ಪಲಿನಲ್ಲಿ ವಾಸವಿದ್ದರು ಕೂಡ ಇಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಓ**

ಸಹಿ/-

1 **ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ**

**ನಂಜನಗೂಡು**